ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವಶಂಕರ ರೆಡ್ಡಿಯವರು ಗೌರಿಬಿದನೂರು ಪಟ್ಟಣಕ್ಕೆ ಕ್ರೀಡಾಂಗಣ ನಿರ್ಮಾಣ ಮಾಡುವ ಬಗ್ಗೆ ಪ್ರಶ್ನೆ ಕೇಳಿದ್ದಾರೆ, ಅವರಿಗೆ ಗೊತ್ತಿರುವ ಹಾಗೆ ಸರ್ಕಾರಿ ಆಜ್ಞೆಯನ್ನು ಮಾಡಿ ಒಟ್ಟು 80 ಲಕ್ಷ ರೂ. ಗಳ ಯೋಜನೆಯಲ್ಲಿ ಅದು ಎಕರೆ ಜಮೀನನ್ನು ನಮ್ಮ ಇಲಾಖೆಗೆ ಹಸ್ತಾಂತರಿಸಿದ್ದಾರೆ, ಆ ರೀತಿ ಹಸ್ತಾಂತರಿಸಿದ ಮೇಲೆ ಜಿಲ್ಲಾ ಪಂಚಾಯಿತಿ ಅನುದಾನದಲ್ಲಿ, ಅದು ಜಿಲ್ಲಾ ಪಂಚಾಯಿತಿ ಅನುದಾನವಾಗಿರಬಹುದು, ಸರ್ಕಾರದ ಅನುದಾನವೇ ಅದು. ಅದರಲ್ಲಿ ಕ್ರೀಡೆಗೋಸ್ಕರ ಎಂಟು ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡುತ್ತೇವೆಂದು ಹೇಳಿ ಒಪ್ಪಿಕೊಂಡಿದ್ದಾರೆ. ಅದಷ್ಟು ಬೇಗ ಅವರನ್ನೇ ಕೇಳಿ ಅವರು ಯಾವಾಗ ಕ್ರೀಡಾಂಗಣ ಪ್ರಾರಂಭ ಮಾಡುವುದಕ್ಕೆ ಗುದ್ದಲಿ ಪೂಜೆ ಇಟ್ಟುಕೊಳ್ಳುತ್ತಾರೋ ಅವತ್ತೇ ಬೇಕಾದರೆ ನಾವು ಪ್ರಾರಂಭ ಮಾಡಿಸುವುದಕ್ಕೆ ತಯಾರಿದ್ದೇವೆ ಎಂದು ಹೇಳುತ್ತೇನೆ.

MR. SPEAKER:- Very good.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ನೀವು ರಾಜ್ಯಾದ್ಯಂತ ಪ್ರವಾಸ ಮಾಡಿ ನೋಡಬೇಕು.

ಅಧ್ಯಕ್ಷರು :- ಗುದ್ದಲ್ಲಿ ಪೂಜೆ ಇಟ್ಟುಕೊಳ್ಳಿ ಎಂದು ಹೇಳುತ್ತಿದ್ದಾರಲ್ಲಾ. ಇದು ಎಲ್ಲಾ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದಲ್ಲ.

(ಗೊಂದಲ)

ಶ್ರೀ ಎನ್. ಸಂಪಂಗಿ :- ಯುವಕರಿಗೆ ಅನ್ಯಾಯ ಮಾಡಬೇಡಿ ಅಧ್ಯಕ್ಷರೇ.

ಅಧ್ಯಕ್ಷರು :- ಸ್ವಲ್ಪ ತಡೆಯಿರಿ. ಗುದ್ದಲಿ ಪೂಜೆ ಇಟ್ಟುಕೊಳ್ಳಿ ಎಂದು ಅವರು ಹೇಳುತ್ತಿದ್ದಾರಲ್ಲಾ, ನೀವು ಏಕೆ ಈ ರೀತಿ ಮಾಡಬೇಕು?

(ಗೊಂದಲ)

ಅಧ್ಯಕ್ಷರು :- ಮುಂದಿನ ಪ್ರಶ್ನೆ ಮಾನ್ಯ ಹನುಮೇಗೌಡರದು. Plese excuse me.

(ಗೊಂದಲ)

ಅಧ್ಯಕ್ಷರು :- ಇದು ಪಿಡಬ್ಲ್ಯೂಡಿ ಮಿನಿಸ್ಟರ್ ಪ್ರಶ್ನೆ. Don't disturb the Minister.

(ಗೊಂದಲ)

ಶ್ರೀ ಎನ್. ಸಂಪಂಗಿ :- ಕ್ರೀಡಾಪಟುಗಳಿಗೆ ನಾವು ಅವಮಾನ ಮಾಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು :- ಅರ್ಧಗಂಟೆ ಚರ್ಚೆಗೆ ನೀವು ಬರೆದು ಕಳುಹಿಸಿ. ನಾನು ಅಲೋ ಮಾಡುತ್ತೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್ :- ಸುಮಾರು ಪ್ರಶ್ನೆಗಳನ್ನು ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೋರಿದರೂ ಈಲಾಗಾಯ್ತು ಒಂದನ್ನೂ ಚರ್ಚೆಗೆ ತೆಗೆದುಕೊಂಡಿಲ್ಲ.

ಅಧ್ಯಕ್ಷರು :- ಈಗ ನೀವು ಬರೆದು ಕಳುಹಿಸಿ. ಆಮೇಲೆ ನೋಡಿ.

ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ

20 (233) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು-ಮಂಗಳೂರು ಎನ್.ಹೆಚ್. ರಸ್ತೆಯ ಬೆಳ್ಳೂರು ಬಳಿ ಡೀವಿಯೇಷನ್ ರಸ್ತೆಗೆ ರಾಜ್ಯ ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ; (ವಿವರ ನೀಡುವುದು);

ಆ) ಖರ್ಚನ್ನು ಮರು ಪಡೆದುಕೊಳ್ಳಲು ಇಲ್ಲಿ ಟೋಲ್‌ಗೇಟ್ ನಿರ್ಮಿಸಿದ್ದು, ಟ್ಯಾಕ್ಸ್ ರೂಪದಲ್ಲಿ ಎಷ್ಟು ಹಣ ಸರ್ಕಾರಕ್ಕೆ ಸಂದಾಯವಾಗಿದೆ; ರಸ್ತೆಗೆ ವಿನಿಯೋಗಿಸಿದ ಹಣ ಟೋಲ್‌ಗೇಟ್‌ನ ಮೂಲಕ ಪೂರ್ತಿ ಮರು ಸಂದಾಯವಾಗಿದೆಯೇ?

ಇ) ಕಳೆದ ಮೂರು ವರ್ಷಗಳಿಂದ ಎಷ್ಟೆಷ್ಟು ಹಣ ಸರ್ಕಾರಕ್ಕೆ ಈ ಗೇಟಿನಿಂದ ಸಂದಾಯವಾಗುತ್ತಿದೆ?

ಈ) ಹಣ ಪೂರ್ತಿ ಮರು ಸಂದಾಯವಾಗಿದ್ದರೂ ಸಹ ಗೇಟ್‌ನವರು ಈಗಲೂ ವಾಹನಗಳಿಂದ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಬೆಳ್ಳೂರು ಬಳಿ ಡೀವಿಯೇಷನ್ ರಸ್ತೆಗೆ ರಾಜ್ಯ ಸರ್ಕಾರ ಯಾವುದೇ ಹಣ ಖರ್ಚು ಮಾಡಿರುವುದಿಲ್ಲ.

ಆ) ವೀರವೈಷ್ಣವಿ ಸೇತುವೆ ಕೂಡು ರಸ್ತೆ ಟೋಲ್ ಪ್ಲಾಜಾ ಮತ್ತು ಭೂಸ್ವಾಧೀನ ಪ್ರಕರಣಗಳಿಗಾಗಿ ಒಟ್ಟು 245 ಲಕ್ಷ ರೂ. ಗಳನ್ನು ಕೇಂದ್ರ ಸರ್ಕಾರದ ಅನುದಾನದಲ್ಲಿ ಖರ್ಚು ಮಾಡಲಾಗಿರುತ್ತದೆ.

ದಿನಾಂಕ 16.2.2003 ರವರೆಗೆ ರೂ.347.95,225.00 ಗಳು ಕೇಂದ್ರ ಸರ್ಕಾರಕ್ಕೆ ಸಂದಾಯವಾಗಿರುತ್ತದೆ. ಸೇತುವೆಗೆ ವಿನಿಯೋಗಿಸಿದ ವೆಚ್ಚವು ಮರು ಸಂದಾಯವಾಗಿರುತ್ತದೆ. ಕೇಂದ್ರ ಸರ್ಕಾರದ ದಿನಾಂಕ 27.8.97ರ ಅಧಿಸೂಚನೆಯಂತೆ ಟೋಲ್ ಅನ್ನು ನಿರಂತರವಾಗಿ ವಸೂಲು ಮಾಡಬೇಕಿರುತ್ತದೆ.

ಇ) ಕಳೆದ ಮೂರು ವರ್ಷಗಳಿಂದ ಕೇಂದ್ರ ಸರ್ಕಾರಕ್ಕೆ ಸೇತುವೆಯ ಟೋಲ್ ಹಣ ಈ ಕೆಳಗಿನಂತೆ ಸಂದಾಯವಾಗಿರುತ್ತದೆ.

ಜುಲೈ 1999 ಮಾರ್ಚ್ 2000ನೇ ವರ್ಷ	ರೂ. 54,00,000.00
2000-2001ನೇ ವರ್ಷ	ರೂ. 1,01,11,113.00
2001-2002ನೇ ವರ್ಷ	ರೂ. 1,02,05,000.00
2002-2003ನೇ ವರ್ಷ (16.2.2003 ರವರೆಗೆ)	ರೂ. 90,79,112.00
ಒಟ್ಟು	**ರೂ 3479522500**

ಈ) ಸೇತುವೆಯನ್ನು ನಿರ್ಮಿಸಲು ವೆಚ್ಚವಾದ ಹಣವು ಪೂರ್ತಿ ಸಂದಾಯವಾಗಿದ್ದರೂ ಸಹ ಕೇಂದ್ರ ಸಾರಿಗೆ ಮಂತ್ರಾಲಯದ ಸುತ್ತೋಲೆ ದಿನಾಂಕ 27.8.97 ರಂತೆ ಟೋಲ್ ಅನ್ನು ನಿರಂತರವಾಗಿ ವಸೂಲು ಮಾಡಬೇಕಾಗುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ :- ಮಾನ್ಯ ಅಧ್ಯಕ್ಷರೇ, ಬೆಳ್ಳೂರು ಸಮೀಪ ಡೀವಿಯೇಷನ್‌ಗೆ ಕೇಂದ್ರ ಸರ್ಕಾರ 2 ಕೋಟಿ 45 ಲಕ್ಷ ರೂಪಾಯಿಗಳನ್ನು ಅನುದಾನವಾಗಿ

ಕೊಟ್ಟಿದ್ದಾರೆಂದು ಹೇಳುತ್ತಾರೆ. ಇದುವರೆಗೂ 3 ಕೋಟಿ 47-48 ಲಕ್ಷ ರೂ.ಗಳು ಹತ್ತಿರ ವಸೂಲಾಗಿದೆ. ಖರ್ಚು ಮಾಡಿದಂಥ ಹಣ ಪೂರ್ತಿ ವಸೂಲಾದರೂ ಕೂಡ ಟೋಲ್‌ಗೇಟ್‌ನಲ್ಲಿ ಈಗಲೂ ಹಣವನ್ನು ವಸೂಲು ಮಾಡುತ್ತಲೇ ಇದ್ದಾರೆ. ಇದಕ್ಕೆ ಕಾರಣವೇನು ಸ್ವಾಮಿ?

ಶ್ರೀ ಧರ್ಮಸಿಂಗ್ :- ಮಾನ್ಯ ಅಧ್ಯಕ್ಷರೇ, ಇದು ರಾಷ್ಟ್ರೀಯ ಹೆದ್ದಾರಿಯವರು ನಿರ್ಮಾಣ ಮಾಡಿದಂಥ ಸೇತುವೆ. ಅದರಲ್ಲಿ ಈಗಾಗಲೇ 2 ಕೋಟಿ 45 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಸೇತುವೆ ಕೆಲಸ ಮುಗಿದಿದೆ. ಹಣದ ವಸೂಲಿ ಕೂಡ ಆಗಿದೆ. ಈಗಾಗಲೇ ಹಣ ವಸೂಲು ಮಾಡಿದ್ದು 3 ಕೋಟಿ 48 ಲಕ್ಷ ರೂ. ಆಗಿದೆ.

1.00 ಪಿ.ಎಂ.

ರಾಷ್ಟ್ರೀಯ ಹೆದ್ದಾರಿಯ ಅಥಾರಿಟಿಯವರು 1997ರಲ್ಲಿ ಒಂದು ಅಮೆಂಡ್‌ಮೆಂಟ್ ಮಾಡಿದ್ದಾರೆ. ರಾಷ್ಟ್ರೀಯ ಹೆದ್ದಾರಿಯ ಪರವಾಗಿ ನಿರ್ಮಿಸಲಾಗತಕ್ಕಂಥ ಸೇತುವೆಯ ಸುಂಕ, ಮತ್ತು ಹಾಗೇಯೇ ಮುಂದೆ ತೆಗೆದುಕೊಂಡು ಹೋದರೆ ಮೇಂಟೆನೆನ್ಸ್ ಸಲುವಾಗಿ ಆ್ಯಕ್ಟ್‌ಗೆ ಅಮೆಂಡ್‌ಮೆಂಟ್ ಮಾಡಿದ್ದಾರೆ. ಅದನ್ನು ಮಾಡಿದವರು ರಾಷ್ಟ್ರೀಯ ಹೆದ್ದಾರಿಯ ಅಥಾರಿಟಿಯವರು. ನಾವು ಮಾಡಿದ್ದಲ್ಲ. ಅದು ರಾಜ್ಯ ಸರ್ಕಾರದ್ದಲ್ಲ. ಕೇಂದ್ರ ಸರ್ಕಾರದ ಹಣ, ಅವರು ಖರ್ಚು ಮಾಡಿದ್ದಾರೆ. ಅದೇ ರೀತಿ ಟೋಲ್ ಕಲೆಕ್ಷನ್ ಅನ್ನು ಕಂಟಿನ್ಯೂ ಮಾಡಿದರೆ ಆ ಸೇತುವೆಯ ಮೇಂಟಿನೆನ್ಸ್‌ಗೆ ಆಗುತ್ತದೆಂದು ಅವರು ಅಮೆಂಡ್‌ಮೆಂಟ್ ಮಾಡಿದ್ದಾರೆ. ಆದ್ದರಿಂದ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :- ಇದು ನಮಗೆ ಸಂಬಂಧಪಟ್ಟದ್ದು, ನಾವು ಅಲ್ಲಿ ತಿರುಗಾಡುತ್ತೇವೆ. ಇವತ್ತು ಇಷ್ಟೆಲ್ಲಾ ಹಣ ವಸೂಲಿಯಾದರೂ ರಸ್ತೆ ರಿಪೇರಿ ಮಾಡಿಲ್ಲ, ಗುಂಡಿಗಳು ಇವೆ, ಅದು ತಮ್ಮ ಗಮನಕ್ಕೆ ಬಂದಿದೆಯೇ ಬಸ್ಸಿನಲ್ಲಿ ಯಾರಾದರೂ ಮಲಗಿದ್ದರೆ ಅಲ್ಲಿ ಹೋದ ತಕ್ಷಣ ಎಚ್ಚರವಾಗುತ್ತದೆ. ಆ ಪರಿಸ್ಥಿತಿಯಲ್ಲಿ ಆ ರಸ್ತೆಯನ್ನು ಮೇನ್‌ಟೇನ್ ಮಾಡುತ್ತಿದ್ದಾರೆ. ಅವರೇ ಮೇಂಟೇನ್ ಮಾಡಿದರೂ ಆ ರಸ್ತೆಯನ್ನೇಕೆ ದುರಸ್ತಿ ಮಾಡಿಲ್ಲ?

ಶ್ರೀ ಧರ್ಮಸಿಂಗ್ :- ದುರಸ್ತಿ ಮಾಡುವ ಅಗತ್ಯವಿದ್ದರೆ ನಾವು ಮಾಡುತ್ತೇವೆ. ನ್ಯಾಷನಲ್ ಹೈವೇ ಪರವಾಗಿ ನಾವು ಮಾಡುತ್ತೇವೆ. ಅವರು ಹಣವನ್ನು ನಮಗೆ ಮರಳಿ ಕೊಡುತ್ತಾರೆ. ಆದ್ದರಿಂದ ಅದನ್ನು ಮಾಡಿಸಿಕೊಡತಕ್ಕ ಪ್ರಯತ್ನ ಮಾಡುತ್ತೇವೆ. ಅಲ್ಲಿ ಗುಂಡಿ ಬಿದ್ದಿದ್ದರೆ ಮುಚ್ಚಿಸಲು ಆದೇಶ ಕೊಡುತ್ತೇನೆ.

ರಾಜ್ಯದಲ್ಲಿ ಅರಣ್ಯ ಭೂಮಿಯ ಒತ್ತುವರಿ

22 (228) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಅರಣ್ಯ ಭೂಮಿಯನ್ನು ಈವರೆವಿಗೂ ಎಷ್ಟು ಒತ್ತುವರಿ ಮಾಡಲಾಗಿದೆ; ಜಿಲ್ಲಾವಾರು ವಿವರಗಳನ್ನು ನೀಡುವುದು; (ಅರಣ್ಯ ವಲಯವಾರು ವಿವರ ನೀಡುವುದು);